

ಕಲೆ: ನಂಜುಂಡಸ್ವಾಮಿ

ಮನೆಯಲ್ಲಿ ಎಲ್ಲಿ ಸದ್ದಾದರೂ ರಾತ್ರಿಯ ನೀರವದಲ್ಲಿ ಕೇಳುತ್ತೆ ಅನ್ನುವುದು ಶುದ್ಧ ಸುಳ್ಳೇಯಾದರೂ ಎಲ್ಲೋ ಏನೋ ಸರಿಸಿದ ಹಾಗೆ, ಮತ್ಯಾರೋ ಮಣ ಮಣ ಮಾತನಾಡಿದ ಹಾಗೆ, ಮನೆಯೆಲ್ಲಾ ಓಡಿಯಾಡುತ್ತಿರುವ ಹೆಜ್ಜೆ ಸದ್ದಿನ ಹಾಗೆ... ಅಸ್ಪಷ್ಟ ಸಪ್ಪಳಗಳ ಅವ್ಯಕ್ತ ಭಯವೊಂದು ಗಾಢವಾಗಿ ನನ್ನಲ್ಲಿ ಆವರಿಸಿಕೊಳ್ಳುತ್ತಿತ್ತು. ಮರುಕ್ಷಣ ಒಳಾಂಗಳದ ಒಂದು ಪಾರ್ಶ್ವವನ್ನು ಮರೆಯಾಗಿ ತೋರುತ್ತಿದ್ದ ನನ್ನ ಕೋಣೆಯಲ್ಲಿದ್ದ ಆ ಒಂಟಿ ಕಿಟಕಿಯನ್ನು ಮುಚ್ಚಿಬಿಡುತ್ತಿದ್ದೆ. ಮೊದಲೇ ಭದ್ರಪಡಿಸಿದ ನನ್ನ ಕೋಣೆಯ ಬಾಗಿಲನ್ನು ಮತ್ತಷ್ಟು ಭದ್ರಗೊಳಿಸಿ, ಕೋಣೆಯಲ್ಲಿದ್ದ ಅತ್ಯಂತ ಭಾರದ ಏಕೈಕ ಮರದ ಕುರ್ಚಿಯನ್ನು ಸದ್ದಾಗದಂತೆ ಸರಿಸಿ, ಮುಚ್ಚಿದ ಬಾಗಿಲಿಗೆ ಅಡ್ಡವಾಗಿಟ್ಟು ಮಲಗಲು ಪ್ರಯತ್ನಿಸುತ್ತಿದ್ದೆ. ಅಪರಾತ್ರಿಯಲ್ಲಿ ಬಾಗಿಲು ತೆರೆದು ಹೊರಬರುವ ಧೈರ್ಯ ಮಾತ್ರ ಎಳ್ಳಷ್ಟೂ ನನ್ನಲ್ಲಿರುತ್ತಿರಲಿಲ್ಲ. ಅದು ನಿಜಕ್ಕೂ ಅಗೋಚರ ಸದ್ದುಗಳೇ ಅಥವಾ ನನ್ನ ಭ್ರಮೆಯೇ ಆ ಕ್ಷಣಕ್ಕೆ ನಂಗೆ ಅರ್ಥವಾಗುತ್ತಿರಲಿಲ್ಲ.

ಬಹುಶಃ ಮೈಸೂರಿಗೆ ನಾನು ಹೋಗಿ ಒಂದೈದಾರು ತಿಂಗಳೇ ಕಳೆದಿರಬೇಕು. ಮಧ್ಯಂತರ ಪರೀಕ್ಷೆಯ ಸಮಯ. ಆಯವ್ವನ ಬಗೆಗಿದ್ದ ಕುತೂಹಲಕ್ಕಿಂತಾ ಹೆಚ್ಚಾಗಿ ಪರೀಕ್ಷೆಗೆ ಓದುವ ಆತಂಕ. ರಾತ್ರಿ ಸುಮಾರು ಹೊತ್ತು ಎಚ್ಚರವಿದ್ದು ಓದುವುದು ಅನಿವಾರ್ಯವಾಗಿತ್ತು.

ಹಾಗೆ ಒಂದು ದಿನ ಓದುತ್ತಾ ಇದ್ದಂತಹ ರಾತ್ರಿಯ ಒಂದು ಹೊತ್ತಿನಲ್ಲಿ ಇದ್ದಕ್ಕಿದ್ದಂತೇ ಯಾರೋ